**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**C.C. No. 459/2018**

**CW- 1** **PW:1**

| | |
|---|---|
| ಸಾಕ್ಷಿಯ ಹೆಸರು | ಃ ಮನೋಜಕುಮಾರ ಶೆಟ್ಟರ |
| ತಂದೆ /ಗಂಡನ ಹೆಸರು | ಃ ಬಸವರಾಜ |
| ವಯಸ್ಸು | ಃ 43 ವರ್ಷ |
| ಉದ್ಯೋಗ | ಃ ಖಾಸಗಿ ಕೆಲಸ |
| ವಾಸಸ್ಥಳ | ಃ ಧಾರವಾಡ |

ದಿಃ **02.05.2025.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ ಃ**

ನಾನು 2013 ರಿಂದ 2015 ರವರೆಗೆ ಮುಥೂಟ್ ಫೈನಾನ್ಸ ನವನಗರ ಶಾಖೆಯಲ್ಲಿ ಅಸಿಸ್ಟಂಟ ಮ್ಯಾನೇಜರ್ ಇನಚಾರ್ಜ್ ಆಗಿ ಕೆಲಸ ಮಾಡಿರುತ್ತೇನೆ.

ನಾನು ಸದರಿ ಫೈನಾನ್ಸನಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿತರು ಚಿನ್ನದ ಸಾಲ ಪಡೆಯಲು ಸದರಿ ಫೈನಾನ್ಸನಲ್ಲಿ ಬಂಗಾರವನ್ನು ಅಡಮಾನ ಇಟ್ಟು ಆರೋಪಿ ನಂ.1 ಈತನು 5,80,700/- ಹಾಗೂ 2 ನೇ ಆರೋಪಿ 3,28,000/- ಸಾಲ ಪಡೆದುಕೊಂಡಿದ್ದರು. ಕೇಶ್ವಾಪೂರ ಪೊಲೀಸ್ ಠಾಣೆಯ ಬ್ಯಾಂಕಿನಲ್ಲಿ ಬಂದು ಬಂಗಾರವನ್ನು ಪರಿಶೀಲನೆ ಮಾಡಿದಾಗ ಅದು ಆರೋಪಿತರು ಕಳ್ಳತನ ಮಾಡಿ ಅಡಮಾನ ಇಟ್ಟ ಬಂಗಾರದ ಆಬರಣಗಳು ಎಂದು ತಿಳಿದು ಬಂತು. ಪೋಲಿಸರು ಸದರಿ ಆಬರಣಗಳನ್ನು ಜಪ್ತಿಪಡಿಸಿಕೊಂಡು ಹೋಗಿರುತ್ತಾರೆ. ಆರೋಪಿತರು ನಮ್ಮ ಕಂಪನಿಗೆ ವಂಚನೆ ಮಾಡಿ ಕಳುವು ಮಾಡಿದ ಬಂಗಾರವನ್ನು ಅಡಮಾನ ಇಟ್ಟ ಕಾರಣ ನಮ್ಮ ಪೈನಾನ್ಸನವರಿಗೆ ನಷ್ಟ ಉಂಟಾಗಿರುತ್ತಾರೆ ಹಾಗಾಗಿ ನಾವು ಪೊಲಿಸರ ಹತ್ತಿರ ಫಿರ್ಯಾದಿ ಸಲ್ಲಿಸಲು ಹೋದಾಗ ತಾಂತ್ರಿಕ ಕಾರಣಗಳಿಂದ ಸದರಿ ಫಿರ್ಯಾದಿಯನ್ನು ಪಡೆದುಕೊಳ್ಳಲಿಲ್ಲ ಹಾಗಾಗಿ ನಾವು ಕಂಪನಿ ಪರವಾಗಿ ಖಾಸಗಿ ಫಿರ್ಯಾದಿ ಸಲ್ಲಿಸಿರುತ್ತೇವೆ. ಸದರಿ ಖಾಸಗಿ ಫಿರ್ಯಾದಿಯ ಜೊತೆ ಅಟೆಸ್ಟೆಡ್ ಸಾಲದ ದಾಖಲೆಗಳನ್ನು, ಕೆವೈಸಿ ದಾಖಲೆಗಳು, ಐಡಿ ಪ್ರೂಫ್ ಅಡ್ರೆಸ್ ಪ್ರೂಫ್ ಹಾಗೂ ಸಾಲದ ಸ್ಟೇಟಮೆಂಟ್ ಸಲ್ಲಿಸಿರುತ್ತೇವೆ. ಘಟನೆ ನಡೆದ ದಿಃ 30.07.2015 ರಂದು ನಾನು ತನಿಖಾಧಿಕಾರಿಯವರಿಗೆ ದಿಃ 30.07.2015 ರಂದು ಮರುಹೇಳಿಕೆ ಸಹ ನೀಡಿರುತ್ತೇನೆ. ಪೊಲಿಸರು ನನ್ನ ಸಮಕ್ಷಮ ಪಂಚನಾಮೆ ಜರುಗಿಸಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಎ.ಪಿ.ಪಿ. ಯವರಿಂದಃ**

ದಿಃ 31.07.2015 ರಂದು ಪೊಲಿಸರು ನಾನು ತೊರಿಸಿದ ಸ್ಥಳದಲ್ಲಿ ಬೆಳಿಗ್ಗೆ 9 ರಿಂದ 10 ಗಂಟೆಯವರೆಗೆ ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ನೆನಪಿಲ್ಲ. ಸದರಿ ಸಮಯದಲ್ಲಿ ಚಾಸಾಃ 2 ಮತ್ತು 3 ಹಾಜರಿದ್ದರು ಎಂದರೆ ನನಗೆ ನೆನಪಿಲ್ಲ.

**ಪಾಟಿಸವಾಲುಃ ಆರೋಪಿ ಪರ ವಕೀಲರು ಗೈರು ಹಾಜರಿದ್ದು ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

(ಶ್ರೀಮತಿ ದೀಪಾ ಜಿ ಮನೇರಕರ)

3 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.